ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	202
ಸದಸ್ಯರ ಹೆಸರು :	ಶ್ರೀ ಸುನೀಲ್ ಗೌಡ ಬಸನಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ :	04-03-2020
ಉತ್ತರಿಸುವ ಸಚಿವರು :	ಮಾನ್ಯ ಕಂದಾಯ ಸಚಿವರು.

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ವಿಜಯಪುರ-ಬಾಗಲಕೋಟೆ ಜಿಲ್ಲೆಗಳಲ್ಲಿ 2019ರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ವಿವಿಧ ನದಿಗಳ ಪ್ರವಾಹ ಹಾಗೂ ಮಳೆಯಿಂದಾಗಿ ಎಷ್ಟು ಗ್ರಾಮಗಳು ಮುಳುಗಡೆಯಾಗಿವೆ; ಇದರಿಂದಾಗಿ ಒಟ್ಟು ಎಷ್ಟು ಹಾನಿ ಸಂಭವಿಸಿದೆ; ಜನ ಮತ್ತು ಜಾನುವಾರುಗಳ ಪ್ರಾಣ ಹಾನಿ ಎಷ್ಟು; [ಸಂಪೂರ್ಣ ವಿವರಗಳನ್ನು ನೀಡುವುದು]</td><td>ವಿಜಯಪುರ-ಬಾಗಲಕೋಟೆ ಜಿಲ್ಲೆಗಳಲ್ಲಿ 2019ರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಿನಲ್ಲಿ ಪ್ರವಾಹದಿಂದ ಬಾಧಿತ ಗ್ರಾಮಗಳು, ಮಾನವ ಮತ್ತು ಜಾನುವಾರುಗಳ ಜೀವಹಾನಿ ವಿವರ ಈ ಕೆಳಗಿನಂತಿರುತ್ತದೆ.
<table><tr><th>ಜಿಲ್ಲೆ</th><th>ಬಾಧಿತ ಗ್ರಾಮಗಳು</th><th>ಮಾನವ ಜೀವಹಾನಿ</th><th>ಜಾನುವಾರು ಜೀವಹಾನಿ</th></tr><tr><td>ವಿಜಯಪುರ</td><td>22</td><td>1</td><td>0</td></tr><tr><td>ಬಾಗಲಕೋಟೆ</td><td>195</td><td>7</td><td>301</td></tr></table>ಪ್ರವಾಹದಿಂದ ವಿಜಯಪುರ ಜಿಲ್ಲೆಯಲ್ಲಿ ರೂ.607.48 ಕೋಟಿ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ ರೂ.2547.34 ಕೋಟಿ ಅಂದಾಜು ಹಾನಿಯಾಗಿರುತ್ತದೆ.</td></tr>
<tr><td>(ಆ)</td><td>ಪ್ರವಾಹದಿಂದಾಗಿ ಒಟ್ಟು ಎಷ್ಟು ಪ್ರಮಾಣದಲ್ಲಿ ರೈತರ ಬೆಳೆಹಾನಿ ಆಗಿದೆ; ಎಷ್ಟು ಮನೆಗಳು ಸಂಪೂರ್ಣವಾಗಿ ಹಾನಿ ಆಗಿವೆ ಮತ್ತು ಎಷ್ಟು ಮನೆಗಳು ಭಾಗಶ: ಹಾನಿಯಾಗಿವೆ; [ಗ್ರಾಮವಾರು ಮಾಹಿತಿ ನೀಡುವುದು]</td><td>ವಿಜಯಪುರ-ಬಾಗಲಕೋಟೆ ಜಿಲ್ಲೆಗಳಲ್ಲಿ ಪ್ರವಾಹದಿಂದ ಮನೆ ಹಾಗೂ ಬೆಳೆ ಹಾನಿ ವಿವರ ಕೆಳಕಂಡಂತಿದೆ:
<table><tr><th>ಜಿಲ್ಲೆ</th><th>ಪೂರ್ಣ ಮನೆಹಾನಿ</th><th>ಭಾಗಶಃ ಮನೆಹಾನಿ</th><th>ಬೆಳೆ ಹಾನಿ (ಹೆಕ್ಟೇರ್‌ಗಳಲ್ಲಿ)</th></tr><tr><td>ವಿಜಯಪುರ</td><td>0</td><td>18</td><td>9,175</td></tr><tr><td>ಬಾಗಲಕೋಟೆ</td><td>532</td><td>2,482</td><td>71,750</td></tr></table>(ಮನೆಹಾನಿ ಮಾಹಿತಿ RGRHCL ವರದಿ ಪ್ರಕಾರ)</td></tr>
<tr><td>(ಇ)</td><td>ಪುನರ್ ವಸತಿ ಕಲ್ಪಿಸಲಾದ ಗ್ರಾಮಗಳ ಸಂಖ್ಯೆ ಎಷ್ಟು ಮತ್ತು ಆ ಗ್ರಾಮಗಳು ಯಾವುವು; ಮತ್ತು ಎಷ್ಟು ಗ್ರಾಮಗಳನ್ನು ಹಾಗೂ ಜನರನ್ನು ಸ್ಥಳಾಂತರಿಸಲಾಗಿದೆ;</td><td>ಪ್ರವಾಹದಿಂದ ಬಾಧಿತ ಪೂರ್ಣ ಗ್ರಾಮಗಳನ್ನು ಸ್ಥಳಾಂತರಿಸುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಇರುವುದಿಲ್ಲ.</td></tr>
<tr><td>(ಈ)</td><td>ಈ ಕುರಿತು ಕೈಗೊಂಡ ಪರಿಹಾರ ಕ್ರಮಗಳು ಏನು; ರೈತರಿಗೆ ನೀಡಲಾದ ಬೆಳೆ ನಷ್ಟ ಪರಿಹಾರ ಎಷ್ಟು; ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ; ಪುನರ್ ವಸತಿ ಶೆಡ್‌ಗಳಲ್ಲಿ ಜನರಿಗೆ ಒದಗಿಸಲಾದ ಮೂಲಭೂತ ಸೌಲಭ್ಯಗಳು ಯಾವುವು;</td><td><table><tr><th>ಜಿಲ್ಲೆ</th><th>ಬೆಳೆಹಾನಿ ಇನ್‌ಪುಟ್ ಸಬ್ಸಿಡಿ (ರೂ. ಕೋಟಿಗಳಲ್ಲಿ)</th><th>ಪುನರ್ ವಸತಿ ಶೆಡ್‌ಗಳ ಸಂಖ್ಯೆ</th></tr><tr><td>ವಿಜಯಪುರ</td><td>17.48
7912 ರೈತರಿಗೆ</td><td>-</td></tr><tr><td>ಬಾಗಲಕೋಟೆ</td><td>90.84
40408 ರೈತರಿಗೆ</td><td>744</td></tr></table></td></tr>
</table>

<table>
<tr><td></td><td>ಪೂರ್ಣ ಮನೆಹಾನಿಯಾದ ಸಂತ್ರಸ್ಥರು ಸರ್ಕಾರದಿಂದ ಬಿಡುಗಡೆಯಾದ ರೂ.50,000/- ಪರಿಹಾರ ಮೊತ್ತದಿಂದ ತಾತ್ಕಾಲಿಕವಾಗಿ ವಸತಿ ಶೆಡ್‌ಗಳನ್ನು ಸಂತ್ರಸ್ಥರೇ ನಿರ್ಮಿಸಿಕೊಂಡಿರುತ್ತಾರೆ.</td></tr>
<tr><td>(ಉ) ಇನ್ನು ಎಷ್ಟು ಗ್ರಾಮಗಳನ್ನು ಸ್ಥಳಾಂತರ ಮಾಡಬೇಕಾಗಿದೆ;</td><td>ಉದ್ಭವಿಸುವುದಿಲ್ಲ.</td></tr>
<tr><td>(ಊ) ಪ್ರವಾಹದಿಂದ ಹಾನಿಗೊಳಗಾದ ಶಾಲೆಗಳ ಸಂಖ್ಯೆ ಎಷ್ಟು; ಶಾಲೆಗಳ ದುರಸ್ಥಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ; ಎಷ್ಟು ಶಾಲೆಗಳನ್ನು ದುರಸ್ಥಿಗೊಳಿಸಲಾಗಿದೆ ಹಾಗೂ ಇದಕ್ಕಾಗಿ ಬಿಡುಗಡೆಯಾದ ಹಣ ಎಷ್ಟು;</td><td><table>
<tr><th>ಜಿಲ್ಲೆ</th><th>ಹಾನಿಯಾದ ಶಾಲೆಗಳ ಸಂಖ್ಯೆ</th><th>ಬಿಡುಗಡೆಯಾದ ಮೊತ್ತ (ರೂ. ಲಕ್ಷಗಳಲ್ಲಿ)</th></tr>
<tr><td>ವಿಜಯಪುರ</td><td>28</td><td>47.00</td></tr>
<tr><td>ಬಾಗಲಕೋಟೆ</td><td>113</td><td>269.21</td></tr>
</table>
ಶಾಲೆಗಳ ದುರಸ್ಥಿ ಕಾರ್ಯ ಪ್ರಗತಿಯಲ್ಲಿರುತ್ತದೆ.</td></tr>
<tr><td>(ಋ) ಪ್ರವಾಹದಿಂದ ಹಾನಿಗೊಳಗಾದ ರಸ್ತೆ ಮತ್ತು ಸೇತುವೆಗಳ ವಿವರ ನೀಡುವುದು ಮತ್ತು ಅವುಗಳ ದುರಸ್ಥಿಗೆ ಕೈಗೊಂಡ ಕ್ರಮಗಳೇನು ಮತ್ತು ಬಿಡುಗಡೆಯಾದ ಹಣ ಎಷ್ಟು ?</td><td>ಬಾಗಲಕೋಟೆ ಜಿಲ್ಲೆಯಲ್ಲಿ ಪ್ರವಾಹದಿಂದ ಹಾನಿಗೊಳಗಾದ ರಸ್ತೆ ಮತ್ತು ಸೇತುವೆಗಳ ದುರಸ್ಥಿಗಾಗಿ ಒಟ್ಟು 358 ಕಾಮಗಾರಿಗಳಿಗೆ ರೂ.454.64 ಲಕ್ಷಗಳನ್ನು ಮಂಜೂರಾತಿ ನೀಡಲಾಗಿದೆ.

ವಿಜಯಪುರ ಜಿಲ್ಲೆಯಲ್ಲಿ ಪ್ರವಾಹದಿಂದ ಹಾನಿಗೊಳಗಾದ ರಸ್ತೆ ಮತ್ತು ಸೇತುವೆಗಳ ದುರಸ್ಥಿಗಾಗಿ ಒಟ್ಟು 92 ಕಾಮಗಾರಿಗಳಿಗೆ ರೂ.248.50 ಲಕ್ಷಗಳನ್ನು ಮಂಜೂರಾತಿ ನೀಡಲಾಗಿದೆ.</td></tr>
</table>

ಕಂಇ 95 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು